# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 12 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 04.03.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 03 ವರ್ಷಗಳಲ್ಲಿ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ "ಸಾರ್ವಜನಿಕ ಉದ್ದೇಶಕ್ಕಾಗಿ" ಮೀಸಲು ಇಟ್ಟ ಸೈಟುಗಳ ಸಂಖ್ಯೆ ಎಷ್ಟು; ಯಾವ ಯಾವ ಉದ್ದೇಶಕ್ಕಾಗಿ ವಿತರಿಸಲಾಗಿದೆ; (ವಿವರ ನೀಡುವುದು) | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕಳೆದ 03 ವರ್ಷಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಒಟ್ಟು 63 ಸಿ.ಎ. ನಿವೇಶನಗಳನ್ನು ಕಾಯ್ದಿರಿಸಲಾಗಿದೆ.<br><br>ಪ್ರಾಧಿಕಾರದ ದಿನಾಂಕ:26.06.2024 ರ ಪತ್ರಿಕಾ ಪ್ರಕಟಣೆಯನ್ವಯ ಕುಲಾಲ ಯಾನೆ ಮೂಲ್ಯರ ಸಂಘ (ರಿ) ರವರು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿ ಹಾಸ್ಟೆಲ್ ಉದ್ದೇಶಕ್ಕಾಗಿ ಒಂದು ನಾಗರಿಕ ಸೌಲಭ್ಯ ನಿವೇಶನವನ್ನು ಹಂಚಿಕೆ ಮಾಡಲಾಗಿರುತ್ತದೆ. |
| (ಆ) | ಮೂಡದಿಂದ ಎಷ್ಟು ಸೈಟುಗಳು ವಿತರಿಸದೇ ಬಾಕಿ ಉಳಿದಿವೆ; ನಗರಾಭಿವೃದ್ಧಿ ಪ್ರಾಧಿಕಾರವು ಖಾಸಗಿ ಭೂಮಿಯನ್ನು ಖರೀದಿಸಿ, ಹಣ ಪಾವತಿಸಿ, ಭೂಮಿಯನ್ನು ತನ್ನ ವಶಕ್ಕೆ ಪಡೆಯಲು ವಿಫಲರಾದ ಪ್ರಕರಣದ ಬಗ್ಗೆ ಕೈಗೊಂಡ ಕ್ರಮವೇನು; (ವಿವರ ನೀಡುವುದು) | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ರಸ್ತುತ ಕುಂಜತ್ತಬೈಲ್ ಗ್ರಾಮದ ವಸತಿ ಬಡಾವಣೆ ಯೋಜನೆಯ 173 ನಿವೇಶನಗಳನ್ನು ವಿತರಿಸಲು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿದ್ದು,, ಹಂಚಿಕೆಗಾಗಿ ಬಾಕಿ ಉಳಿದಿರುತ್ತದೆ.<br><br>ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ, ಖಾಸಗಿ ಭೂಮಿಯನ್ನು ಖರೀದಿಸಿ, ಹಣ ಪಾವತಿಸಿ ಭೂಮಿಯನ್ನು ತನ್ನ ವಶಕ್ಕೆ ಪಡೆಯಲು ವಿಫಲರಾದ ಪ್ರಕರಣಗಳು ಯಾವುದು ಇರುವುದಿಲ್ಲ. |
| (ಇ) | ಕಳೆದ 03 ವರ್ಷಗಳಿಂದ ಮಂಗಳೂರು ನಗರ ವ್ಯಾಪ್ತಿಯ ಮೂಡಾದಿಂದ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ;(ವಿವರ ನೀಡುವುದು) | ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ವಸತಿ ಬಡಾವಣೆ ಯೋಜನೆಗಳ ವಿವರ:-<br>1. ಮಂಗಳೂರು ತಾಲ್ಲೂಕಿನ ಕುಂಜತ್ತಬೈಲ್ ಗ್ರಾಮದ ಸ.ನಂ. 6/1, 6/2, 6/3, 6/5 ಮತ್ತು ಇತರೆ ಸ.ನಂ ರಲ್ಲಿನ ಒಟ್ಟು 17 ಎಕರೆ 49 ಸೆಂಟ್ಸ್ ಜಮೀನಿನಲ್ಲಿ ವಸತಿ ಬಡಾವಣೆ ಅಭಿವೃದ್ಧಿ ಕಾಮಗಾರಿ.<br>2. ಮಂಗಳೂರು ತಾಲ್ಲೂಕಿನ ಮಧ್ಯ-ಚೇಳ್ಯಾರು ಗ್ರಾಮದ ಸ.ನಂ. 9/2ಎ, 12/1, 48/23, 49/1ಎ ಮತ್ತು ಇತರೆ ಸ.ನಂ. ರಲ್ಲಿನ ಒಟ್ಟು 45 ಎಕರೆ 85.50 ಸೆಂಟ್ಸ್ ಜಮೀನಿನಲ್ಲಿ ವಸತಿ ಬಡಾವಣೆ ಅಭಿವೃದ್ಧಿ ಕಾಮಗಾರಿ. |

| | | |
|---|---|---|
| | | 3. ಉಳ್ಳಾಲ ತಾಲ್ಲೂಕಿನ ಕೋಣಾಜೆ ಗ್ರಾಮದ ಸ.ನಂ. 85/4 ಮತ್ತು ಇತರೆ ಸ.ನಂ. ರಲ್ಲಿನ ಒಟ್ಟು 13 ಎಕರೆ 11 ಸೆಂಟ್ಸ್ ವಿಸ್ತೀರ್ಣದ ಜಮೀನಿನಲ್ಲಿ ವಸತಿ ಬಡಾವಣೆ ಅಭಿವೃದ್ಧಿ ಕಾಮಗಾರಿ. |
| (ಈ) | ಮಹಾನಗರ ಪಾಲಿಕೆಯ ಮೂಡಾ ವ್ಯಾಪ್ತಿಯಲ್ಲಿ ಎಷ್ಟು ಲೇಔಟ್‌ಗಳನ್ನು ರಚಿಸಲಾಗಿದೆ; ಎಷ್ಟು ಸೈಟ್‌ಗಳನ್ನು ಸಾರ್ವಜನಿಕರಿಗೆ ನೀಡಲಾಗಿದೆ; ಎಷ್ಟು ಖಾಸಗಿ ಭೂಮಿಯನ್ನು ಯಾವ ದರದಲ್ಲಿ ಪಡೆಯಲಾಗಿದೆ?(ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಧಿಕಾರದಿಂದ ಮಂಗಳೂರು ತಾಲ್ಲೂಕಿನ ಕುಂಜತ್ತಬೈಲ್ ಗ್ರಾಮದ ಸ.ನಂ. 6/1, 6/2, 6/3, 6/5 ಮತ್ತು ಇತರೆ ಸ.ನಂ ರಲ್ಲಿನ ಒಟ್ಟು 17 ಎಕರೆ 49 ಸೆಂಟ್ಸ್ ಜಮೀನಿನಲ್ಲಿ ವಸತಿ ಬಡಾವಣೆ ರಚಿಸಲಾಗಿದ್ದು, ಒಟ್ಟು 173 ನಿವೇಶನಗಳ ಹಂಚಿಕೆಗಾಗಿ ದಿನಾಂಕ:19.09.2024 ರಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.<br><br>ಒಟ್ಟು 17.49 ಎಕರೆ ಖಾಸಗಿ ಜಮೀನನ್ನು ಸೆಂಟ್ಸ್ ಒಂದಕ್ಕೆ ದರ ರೂ.2,30,000/- ರಂತೆ ಖರೀದಿಸಲಾಗಿರುತ್ತದೆ. |

ಕಡತ ಸಂಖ್ಯೆ: ನಅಇ 87 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು